

‘ಶೂನ್ಯ ಸಂಪಾದನೆ, ಇದ್ರಲ್ಲಿ ಏನಿದೆ ಮಾದೇವ ನಿನಗ್ ಗೊತ್ತಿಲ್ದೆ ಇರೋದು. ಈ ಭಾಗದ ಸಾರಾಂಶ ಮತ್ತೆ ಈ ಚಾಪ್ಟರ್‌ಲಿ ಸ್ವಲ್ಪ ನೋಡ್ಕೊಂಡ್ರೆ ಆಯ್ತು’ – ಹಿಂಗ್ ಹೇಳ್ಕೊಡ್ತಾ ಇದ್ರು. ಅದನ್ನ ನನ್ನಲ್ಲೇ ಇಟ್ಕೊತಾ ಇರ್ಲಿಲ್ಲ. ಎಲ್ರುಗೂ ಅದನ್ನ ಹೇಳುವೆ... ಅವರ ಕಾಲೇಜ್ ದಿನಗಳನ್ನ ಹೀಗೆ ಹೇಳ್ತಾ ಇರ್ತಾರೆ, ಯಾರಿಗ್ ಇಷ್ಟ ಇಲ್ಲ ಹೇಳಿ ಕಾಲೇಜು ದಿನಗಳ ನೆನಪನ್ನ ಮೆಲುಕಾಕೋಕೆ. ಮಹಾರಾಜ ಕಾಲೇಜಿನ ಬೇವಿನಮರದ ಕೆಳಗೆ ‘ಪಂಚಮ’ ಪತ್ರಿಕೆ ಬಿಡುಗಡೆಗೊಂಡದ್ದನ್ನ ಸಾಕ್ಷಿಸಮೇತ ಹೇಳ್ತಾರೆ. ‘ನನಗೂ ನನ್ನ ಹೈಸ್ಕೂಲ್ ಗುರುಗಳು ಅಂದ್ರೆ ಪೂಜ್ಯ ಭಾವ ಸರ್. ಎಸ್‌ಎಸ್‌ಎಲ್‌ಸಿ ಮುಗ್ದು ಹದಿನೈದು ವರ್ಷ ಆದ್ರೂ ನನ್ ಬಗ್ಗೆ ತುಂಬಾ ವಿಚಾರಿಸಿಕೊಳ್ತಾರ’ ಅಂತ ನಾನ್ ಹೇಳಿದ್ರೆ, ‘ನೀವು ಇನ್ನೂ ಚಿಕ್ ಮಕ್ಳ ರೀತಿ ಆಡ್ತೀರಲ್ರಿ ಅದ್ಕೆ, ಹೆಂಗಪ್ಪಾ ಏನೋ ಅಂತ...’

ಕೆಲವು ವಿಚಾರಕ್ಕೆ ನಾನು ಕೋಪಿಸಿಕೊಳ್ಳುವೆ. ನಂಗ್ ಸ್ವಲ್ಪ ಮುಂಗೋಪ ಸ್ವಲ್ಪ ಜಾಸ್ತಿನೆ. ಬೇಗ ರಿಯಾಕ್ಟ್ ಮಾಡ್ತಿದ್ದೆ. ಇದನ್ನ ಅವಾಗವಾಗ ಗಮನಿಸಿದ್ದ ದೇಮ, ‘ಏನೋ ಯಾರೋ ತಪ್ಪು ಮಾಡಿದಾಗ ಅವರನ್ನ ಬೇರ್ಪಡಿಸಿ ನೀವು ಅಟ್ಯಾಕ್ ಮಾಡೋಕಿಂತ, ಅದು ನನ್ನದೊಂದು ಭಾಗ ಅಂದ್ಕಬುಟ್ರೆ ಅದ್ನ ಅರ್ಥ ಮಾಡ್ಕೊಂಡು ತಿದ್ದೋಕೆ ನೋಡ್ತೀವಿ, ಅಲ್ವಾ?’ ಅಂದಾಗ, ನಾನು ಹೂ ಅನ್ನುವೆ. ಏನಾದ್ರು ಕೋಪ ಬಂದಾಗ ಕೋಪ ಬರ್ಸಿದೋರ ಬೇರೇನೆ ಮಾಡಿ ಮತ್ತೆ ರೇಗುವೆ. ಆದ್ರೂ ಅವರ ಮಾತು ಕೆಲವು ಸಲ ಕಾಡಿ ಈಗ ಸುಮ್ಮನಾಗುವೆ.

ಸಾಹಿತ್ಯದ ಬಗ್ಗೆ ಯಾವಾಗಲೂ ಕನೆಕ್ಟ್ ಮಾಡಿ ಮಾತಾಡ್ತಾರೆ. ಕೆಲವು ದೊಡ್ಡ ಪದಗಳ ಬಳಕೆ ಮಾಡಿದ್ರೆ, ‘ರೀ, ನೀವು ಪದಗಳಲ್ಲೇ ತೇಲ್ತೀರಿ,